# ಶರಣಾಗತ v/s ದಿ.ಪುಣ್ಯವಂತ

■ **ಶಿವಕುಮಾರ ಮಾವಲಿ**
ಕಲೆ: ಸಂತೋಷ್ ಸಸಿಹಿತ್ಲು



'ಸಾರ್, ಅವ್ರು ಇನ್ನೂ ಬದುಕೇ ಇದ್ದಾರೆ. ನಾನ್ ನೋಡಿದಾಗ ಜೋಳದ ರೊಟ್ಟಿ–ಪುಂಡಿ ಸೊಪ್ಪಿನ ಪಲ್ಯ ತಿಂತಿದ್ರು', ಪುಣ್ಯವಂತನ ಮನೆಯಿಂದ ಅವಸರವಸರವಾಗಿ ಹೊರಗೆ ಬಂದ ಪೊಲೀಸ್ ಪೇದೆ ಆಶ್ಚರ್ಯ ಮತ್ತು ಭಯಮಿಶ್ರಿತ ಧ್ವನಿಯಲ್ಲಿ ಹೀಗೆ ಹೇಳಿದಾಗ, ಜೀಪಿನಲ್ಲಿ ಕೂತಿದ್ದ ಸಬ್ ಇನ್ಸ್‌ಪೆಕ್ಟರ್ ಸುದರ್ಶನ್ ಕೂಡ ಸರಕ್ಕನೆ ಅಲರ್ಟ್ ಆದರು. ತಮ್ಮ ಕೈಯಲ್ಲಿದ್ದ ಫೈಲಿನಲ್ಲಿ ಮನೆಯ ವಿಳಾಸವನ್ನೊಮ್ಮೆ ಖಾತರಿ ಮಾಡಿಕೊಂಡರು. ಸರಿಯಾಗಿಯೇ ಇತ್ತು. ವ್ಯಕ್ತಿಯ ಹೆಸರನ್ನು ಹೇಗೆ ಖಾತರಿ ಮಾಡಿಕೊಳ್ಳುವುದು ಎಂದು ಯೋಚಿಸುತ್ತಿರುವಾಗಲೇ, ದಿ. ಪುಣ್ಯವಂತ ಶಿಕ್ಷಣ ಇಲಾಖೆ ಎಂದು ಮನೆಗೆ ನೇತು ಹಾಕಿದ್ದ ಖಾಕಿ ಬಣ್ಣದ ಮರದ ಹಲಗೆ ಕಾಣಿಸಿತು. ಪುಣ್ಯವಂತ ಎಂಬ ಹೆಸರೇನೋ ಸರಿಹೊಂದುವಂತಿತ್ತು. ಆದರೆ ಅದರ ಹಿಂದಿನ ಪೂರ್ವಪದ ಅನ್ನು ನೋಡಿ ಸಬ್ ಇನ್ಸ್‌ಪೆಕ್ಟರ್‌ಗೆ ದಿಗಿಲಾಯಿತು. ಪೇದೆಯನ್ನು ಕರೆದು ನೀನ್ ಸರಿಯಾಗಿ ನೋಡಿದ್ಯಾ? ಒಳಗಿದ್ದದ್ದು ಪುಣ್ಯವಂತ ಅನ್ನೋದು ನಿನಗೆ ಪಕ್ಕಾ ಗ್ಯಾರಂಟಿ ಇದ್ಯಾ ಎಂದು ಕೇಳಿದರು. ಅದಕ್ಕೆ ಆ ಪೇದೆ ಹೌದು ಸರ್, ಹಂಡ್ರೆಡ್ ಪರ್ಸೆಂಟ್ ಪಕ್ಕಾ. ಅವರ ವಯಸ್ಸಾದ ಅಮ್ಮ ಪುಣ್ಯ, ತಿಂಡಿ ತಿಂದಾದ್ಮೇಲೆ ನನ್ನ ಔಷಧಿ ಗುಳಿಗೆ ತಂದುಕೊಡೋ ಅಂತ ಅವರಿಗೆ ಹೇಳ್ತಿದ್ರು ಸಾರ್ ಎಂದ. ಆಗ ಇನ್ಸ್‌ಪೆಕ್ಟರ್ ಆ ಪೇದೆಗೆ ಮನೆಯ ಕಟಾಂಜನಕ್ಕೆ ನೇತುಹಾಕಿದ್ದ ನಾಮಫಲಕವನ್ನು ತೋರಿಸಿ, ಅಲ್ಲಿ ನೋಡು, ದಿ. ಪುಣ್ಯವಂತ ಅಂತ ಇದೆ. ಅಂದರೆ ದಿವಂಗತ ಪುಣ್ಯವಂತ ಅಂತ ಅಲ್ವಾ? ಆತ ಈಗಾಗಲೇ ಸತ್ತು ಹೋಗಿರೋದು ನಿಜ ಅನ್ನುತ್ತೆ ಎಂದು ಮತ್ತೆ ಗೊಂದಲ ಮೂಡಿಸಿದರು. ತಮ್ಮ ಸಾಹೇಬರು ಇಷ್ಟು ಬುದ್ಧಿಹೀನರಾಗಿ ಮಾತನಾಡಲು ಹೇಗೆ ಸಾಧ್ಯ?

ಯಾರಾದರೂ ಸತ್ತ ವ್ಯಕ್ತಿಯ ಹೆಸರಿನ ಫಲಕವನ್ನು ಮನೆಯ ಮುಂದೆ, ಅದರಲ್ಲೂ ದಿವಂಗತ ಎಂದು ಬರೆಸಿಕೊಳ್ಳುತ್ತಾರೆಯೆ ಎಂದು ಯೋಚಿಸಿ, ಅಸಹಾಯಕ ಸ್ಥಿತಿಯಲ್ಲಿ ಸಾಹೇಬರು ಹೀಗೆ ಯೋಚಿಸುತ್ತಿರಬಹುದು ಎಂದುಕೊಂಡು ಅಲ್ಲಿಯೇ ನಡೆದು ಹೋಗುತ್ತಿದ್ದ ವ್ಯಕ್ತಿಯೊಬ್ಬನನ್ನು ಕರೆದು ವಿಚಾರಣೆ ಮಾಡೋಣ ಎಂದುಕೊಂಡನಾದರೂ ಸಾಹೇಬರ ಒಪ್ಪಿಗೆಯಿಲ್ಲದೆ ಹಾಗೆ ಮಾಡುವುದು ಉದ್ಧಟತನವಾದೀತು ಎಂದು, ಸರ್, ಅಲ್ಲಿ ಹೋಗ್ತಿದಾರಲ್ಲ ಅವರನ್ನೊಮ್ಮೆ ಕೇಳಿ ನೋಡೋಣ್ವಾ? ಎಂದು ಸಂಕೋಚದ ಧ್ವನಿಯಲ್ಲಿಯೇ ಕೇಳಿದ. ಪೇದೆಯ ಈ ಉಪಾಯ ಅವನ ಸಾಹೇಬರಿಗೆ ಸರಿ ಕಾಣಲಿಲ್ಲ. ವ್ಯಕ್ತಿಯ ಗೌಪ್ಯತೆಯನ್ನು ಕಾಪಾಡೋದು ನಮ್ಮ ಜವಾಬ್ದಾರಿಯಾಗಿರುತ್ತದೆ. ಹಾಗೆಲ್ಲ ಸಿಕ್ಕಸಿಕ್ಕವರನ್ನು ವಿಚಾರಿಸೋದು ಬೇಡ ಎಂಬುದು ಅವರ ನಿಲುವಾಗಿತ್ತು. ಸಾರ್, ನಾವು ಬಂದಿರೋದೇ ಆತ ಬದುಕಿದ್ದಾನೋ ಇಲ್ಲವೋ ಎಂಬುದನ್ನು ಖಚಿತ ಮಾಡಿಕೊಳ್ಳಲಿಕ್ಕೆ ಎಂದ ಮೇಲೆ ಅದರಲ್ಲಿ ಗೌಪ್ಯವಾಗಿಡುವಂಥದ್ದು ಏನಿದೆ? ಬನ್ನಿ ಸೀದಾ ಮನೆಯೊಳಗೆ ಹೋಗಿ ಇರೋ ವಿಷ್ಯ ತಿಳಿಸೋಣ ಎಂದು ತನ್ನ ಗಡಸು ಧ್ವನಿಯಲ್ಲಿ ಇನ್ಸ್‌ಪೆಕ್ಟರ್ ಸುದರ್ಶನ್‌ಗೆ ಹೇಳಿ ಅವರ ಉತ್ತರಕ್ಕೂ ಕಾಯದೆ ಮನೆಯ ಮೆಟ್ಟಿಲ ಬಳಿ ಹೋಗಿ ನಿಂತಿದ್ದ. ತಮಗಿದ್ದ ಆಯ್ಕೆ ಅದೊಂದೆಯೇನೋ ಎಂಬಂತೆ ಇನ್ಸ್‌ಪೆಕ್ಟರ್ ಕೂಡ ಅದೇ ಮಾರ್ಗ ಹಿಡಿದರು.

***

ಯಾರಾದರೂ ಊಹಿಸಿಕೊಳ್ಳಬಹುದಾದ ಯಾವುದೋ ಒಂದು ಪೊಲೀಸ್ ಸ್ಟೇಷನ್. ಇನ್ಸ್‌ಪೆಕ್ಟರ್ ಎದುರು ಕೂತ ವ್ಯಕ್ತಿ ಸುಮಾರು ಅರವತ್ತರ ಆಸುಪಾಸಿನಲ್ಲಿರಬಹುದು. ಯಾವ ಗಡಿಬಿಡಿಯಿಲ್ಲದೆ ಸಾವಧಾನವಾಗಿ ಅಲ್ಲಿಗೆ ಬಂದಿದ್ದಾನೆ. ಕಂಪ್ಲೇಂಟ್ ಕೊಡಲು ಬಂದವರಲ್ಲಿರಬಹುದಾದ ಉದ್ವೇಗ, ಆತಂಕಗಳು ಆತನಲ್ಲಿ ಇಲ್ಲ. 'ಸರ್, ನಾನೊಂದು ಕೊಲೆ ಮಾಡಿದ್ದೇನೆ' ಎಂದು ಸಣ್ಣ ಧ್ವನಿಯಲ್ಲಿ ಹೇಳಿದಾಗ ಇನ್ಸ್‌ಪೆಕ್ಟರ್ ಅಲರ್ಟ್ ಆಗುತ್ತಾರೆ. ಸಾಮಾನ್ಯವಾಗಿ ಈ ರೀತಿ ಯಾರನ್ನೊ ಕೊಂದು ತಾವೇ ಶರಣಾಗಲು ಬರುವವರಲ್ಲಿ ಒಂದು ಅನೂಹ್ಯ ಕ್ರೂರತೆ ಇರುತ್ತದೆ. ಎಷ್ಟೋ ಜನ ತಾವು ಕೊಂದ ವ್ಯಕ್ತಿಯ ಯಾವುದೋ ಒಂದು ಅಂಗವನ್ನೋ ಅಥವಾ ತಲೆ ಕೂದಲನ್ನೋ ಹಿಡಿದು ರಕ್ತ ಸಿಕ್ತ ಕೈಗಳಲ್ಲಿಯೇ ಸ್ಟೇಷನ್ನಿಗೆ ಬಂದಿರುತ್ತಾರೆ. ಆದರೆ ಈ ವ್ಯಕ್ತಿ ನೀಟಾಗಿ ಇನ್‌ಶರ್ಟ್ ಮಾಡಿಕೊಂಡು, ಬಾಚಿದ ಕ್ರಾಪು ಕೂಡ ಕೊಂಕದಂತೆ ಶಿಸ್ತಿನ ಮನುಷ್ಯನಾಗಿ ಬಂದು ತಾನು ಕೊಲೆ ಮಾಡಿದ್ದೇನೆ ಎನ್ನುತ್ತಿರುವುದು ಸ್ವಲ್ಪ ವಿಚಿತ್ರ ಅನ್ನಿಸಿದರೂ ಆ ಇನ್ಸ್‌ಪೆಕ್ಟರ್ ವಿಚಲಿತನಾಗದೆ, ಕೊಲೆಗಡುಕನನ್ನು ಹೇಗೆ ಟ್ರೀಟ್ ಮಾಡಬೇಕೋ ಹಾಗೆ ಮಾಡಲು ಪ್ರೊಸೀಜರ್ ಏನಿದೆ ಅದನ್ನು ಮಾಡಲು ಮುಂದಾದರು.

'ಯಾರನ್ನು ನೀನು ಕೊಂದದ್ದು?'

'ಪುಣ್ಯವಂತನನ್ನು ಸರ್'

'ಯಾಕೆ?'

'ನಾನೇ ಸರೆಂಡರ್ ಆದ ಮೇಲೂ ಅದರ ಅಗತ್ಯ ಇದೆಯಾ ಸರ್?'

'ಅಗತ್ಯ ನಮಗೇನೂ ಇಲ್ಲ. ಆದರೆ ಕೋರ್ಟ್ ಕೇಳುತ್ತೆ.